**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಸಕೋಟೆ**

**ಸಿ.ಸಿ. 304–2011**

| | | |
|---|---|---|
| ಹೆಸರು | ಮುನಿರಾಜು | ಪ್ರಾ.ಸಾ.9 |
| ತಂದೆ ಹೆಸರು | .ದಾಸಪ್ಪ | ಚಾ.ಸಾ.10 |
| ವಯಸ್ಸು | 51 ವರ್ಷ | |
| ಕೆಲಸ | ಎಎಸ್‌ಐ | ಸಾ.ಪ್ರ.ವ.ಬೋ |
| ಹಾಲಿ ವಾಸ | ಹೊಸಕೋಟೆ | ದಿ:–15–3–2018 |

**ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :–**

ನಾನು ಜೂನ್ 2010 ರಿಂದ ಮೇ 2011 ರವರೆಗೆ ನಂದಗುಡಿ ಪೋಲೀಸ್ ಠಾಣೆಯಲ್ಲಿ ಹೆಚ್‌ಸಿ ಆಗಿ ಕಾರ್ಯ ನಿರ್ವಹಿಸಿದ್ದೇನೆ.

.ಜನವರಿ ಮಾಹೆಯಲ್ಲಿ ನಂದಗುಡಿ ಠಾಣೆಯ ಅರೆಹಳ್ಳಿ ಗ್ರಾಮದಲ್ಲಿ ಅಂಬೇಡ್ಕರ್ ಪ್ರತಿಮೆ ಪ್ರತಿಷ್ಠಾಪನೆ ಮಾಡುವ ವಿಚಾರದಲ್ಲಿ 2 ಗುಂಪುಗಳಲ್ಲಿ ಗಲಾಟೆಯಾಗಿತ್ತು. ಆ ಕುರಿತು ಬಂದೋಬಸ್ತ್ ಕರ್ತವ್ಯಕ್ಕೆ ಅಲ್ಲಿ ಪೋಲೀಸರನ್ನು ನೇಮಿಸುತ್ತಿದ್ದರು. ದಿ 08.01.2011ರಂದು ನನಗೆ ಮತ್ತು ಚಾಸಾ.1 , 11 ರಿಂದ 13 ರವರನ್ನು ಅರೆಹಳ್ಳಿ ಗ್ರಾಮದಲ್ಲಿ ಕರ್ತವ್ಯಕ್ಕೆ ನೇಮಿಸಿದ್ದರು. ಆ ಸಮಯದಲ್ಲಿ ನ್ಯಾನಪ್ಪರವರ ಮನೆಯ ಮುಂದೆ ಚಾಸಾ.1ರ ಕರ್ತವ್ಯದಲ್ಲಿದ್ದಾಗ 1 ಮತ್ತು 2ನೇ ಆರೋಪಿತರು ಚಾಸಾ.1ರವರ ಅಂಗಿಯ ಬಲಗಡೆ ಜೇಬನ್ನು ಹರಿದು ಹಾಕಿದರು. ಆಗ ನಾವೆಲ್ಲಾ ಸಮಾಧಾನ ಮಾಡಿದ್ದೆವು. ಆಗ 3 ರಿಂದ 6ನೇ ಆರೋಪಿತರು ಸಹ ಚಾಸಾ.1ರವರಿಗೆ ಕೂಗಾಟ ಮಾಡಿ ಬೆದರಿಕೆ ಹಾಕಿದ್ದರು. ಅಗ ನಾವು ಮತ್ತು ಗ್ರಾಮಸ್ಥರು ಸೇರಿ ಸಮಾಧಾನ ಮಾಡಿದ್ದೆವು. ಆರೋಪಿತರನ್ನು ನೋಡಿದರೆ ಗುರ್ತಿಸುತ್ತೇನೆ. ಸಾಕ್ಷಿಯು 4 ಮತ್ತು 5ನೇ ಆರೋಪಿತರನ್ನು ನೋಡಿ ಗುರ್ತಿಸಿರುತ್ತಾರೆ. ಉಳಿದ ಆರೋಪಿತರಿಗೆ ವಿನಾಯತಿ ಅರ್ಜಿ ಹಾಕಿದ್ದರಿಂದ , ಗುರ್ತಿಸಲು ತಕರಾರು ಇರುವುದಿಲ್ಲ ಎಂದು ತಿಳಿಸಿರುತ್ತಾರೆ. ಈ ಸಂಬಂಧ ನಾನು ನನ್ನ ಹೇಳಿಕೆ ನೀಡಿರುತ್ತೇನೆ. ಸಾಕ್ಷಿ ಮುಮ.1 ಶರ್ಟ್‌ನ್ನು ನೋಡಿ ಗುರ್ತಿಸಿರುತ್ತಾರೆ.

**ಪಾಟೀ ಸವಾಲು: ಆರೋಪಿ ಪರ ವಕೀಲರಿಂದ:–**

ನಾವು ಒಟ್ಟು 5 ಜನ ಬಂದೋಬಸ್ತ್‌ಗೆ ಹೋಗಿದ್ದೆವು. ಗಲಾಟೆಯಾದ ಸಮಯದಲ್ಲಿ ಸ್ಥಳದಿಂದ ಅಕ್ಕಪಕ್ಕದಲ್ಲಿ ನಾವು ಇದ್ದೆವು. ನಾವು ಸುಮಾರು 10 ಅಡಿಗಳ ದೂರದಲ್ಲಿದ್ದೆವು. ಅಲ್ಲಿ ಯಾವ ಗುಂಪುಗಳ ಮದ್ಯೆ ಗಲಾಟೆಯಾಗಿತ್ತು ಎಂದು ಹೇಳಲಾಗುವುದಿಲ್ಲ. ಆ ದಿನ ನಾವು ಸ್ಥಳದಲ್ಲಿ ಕರ್ತವ್ಯದಲ್ಲಿದ್ದ ಬಗ್ಗೆ ಠಾಣಾ ದಿನಚರಿಯಲ್ಲಿ ನಮೂದಿಸಲಾಗಿರುತ್ತದೆ. ಅದರಲ್ಲಿ ನಮ್ಮ ಸಹಿ ಇರುವುದಿಲ್ಲ.

ಚಾಸಾ.1 ನಮ್ಮ ಸಿಬ್ಬಂದಿ ಎಂದರೆ ಸರಿ. ಮುಮ.2 ರಂತಹ ಬಟ್ಟೆ ಎಲ್ಲಾ ಕಡೆ ಸಿಗುತ್ತದೆ ಎಂದರೆ ಸರಿ. ಮುಮ.1 ಚಾಸಾ.1ರವರ ಅಂಗಿಯಲ್ಲ ಎಂದರೆ ಸರಿಯಲ್ಲ.

ನಾನು ಹೇಳಿದಂತೆ ಸ್ಥಳದಲ್ಲಿ ಯಾವುದೇ ಗಲಾಟೆಯಾಗಿರಲಿಲ್ಲ ಎಂದರೆ ಸರಿಯಲ್ಲ. ನಾವು ಸ್ಥಳದಲ್ಲಿ ಯಾರೂ ಕರ್ತವ್ಯದಲ್ಲಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿಗಳು ನಾನು ಹೇಳಿದಂತೆ ಯಾವುದೇ ಗಲಾಟೆ ಮಾಢದೆ ಇದ್ದರೂ ಅಲ್ಲಿ ಯಾವುದೇ ಘಟನೆಯಾಗದೆ ಇದ್ದರೂ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಊರಿನಲ್ಲಿ ಎರಡೂ ಗುಂಪುಗಳ ಮದ್ಯೆ ಯಾವುದೇ ಗಲಾಟೆಯಾಗಿಲ್ಲ ಎಂದರೆ ಸರಿಯಲ್ಲ.

ನಾವು ಸ್ಥಳದಲ್ಲಿ 8.30 ಕ್ಕೆ ಇದ್ದೆ. ಸ್ಥಳದಲ್ಲಿದ್ದ ಉಳಿದವರ ಹೆಸರು ನನಗೆ ಹೇಳಲಾಗುವುದಿಲ್ಲ. ನಾನು ಹೇಳಿದಂತೆ ಯಾವುದೇ ಘಟನೆಯಾಗಿಲ್ಲ, ಯಾವುದೇ ಘಟನೆ ನೋಡಿಲ್ಲ ಎಂದರೆ ಸರಿಯಲ್ಲ. ಆರೋಪಿಗಳು ಯಾವುದೇ ಗಲಾಟೆ ಮಾಡದೆ ಇದ್ದರೂ ಚಾಸಾ.1ರವರಿಗೆ ಸಹಾಯ ಮಾಡಲು ಮೇಲಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)**

**ಓ.ಹೇ.ಕೇ.ಸ.ಇದೆ**

**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,ಹೊಸಕೋಟೆ.**